ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
(ಹಿಂದಿನ ಪದನಾಮ "ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ")

Karnataka State Akkamahadevi Women's University, Vijayapura
(Formerly known as "Karnataka State Women's University, Vijayapura")

NAAC II CYCLE – SSR: Criteria 7:

7.3: Institutional Distinctiveness

KOUSHALYA WOMEN TECHNOLOGY PARK

A Distinctive Feature of
Karnataka State Akkamahadevi Women University
Vijayapura

Weblink : http://ka.kswu.ac.in/women-tech-park

- Newspaper Reports on Training Program Conducted

ಅಂತಾರಾಷ್ಟ್ರೀಯ ಜೈವಿಕ ಇಂಧನ ದಿನಾಚರಣೆಗೆ ಚಾಲನೆ | ಮಹಿಳಾ ವಿವಿ, ವಿಜಯಪುರ ಲಯನ್ಸ್ ಕ್ಲಬ್ ಸಹಯೋಗ

ಉದಯವಾಣಿ, ದಿ. 18/8/2021, ಪು-2

ಪರಿಸರ ರಕ್ಷಣೆಗೆ ಮನೆಗೊಂದು ಮರ ಇರಲಿ

ವಿಜಯಪುರ: ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಜೈವಿಕ ಇಂಧನ ದಿನಾಚರಣೆ ಕಾರ್ಯಕ್ರಮಕ್ಕೆ ಕುಲಸಚಿವೆ ಸುನಂದಮ್ಮ ಚಾಲನೆ ನೀಡಿದರು.

ವಿಜಯಪುರ: ಪ್ರಕೃತಿಯಲ್ಲಿ ಸಕಲ ಜೀವರಾಶಿಗಳಿಗೆ ಉಸಿರಿನ ಸೆಲೆಯಾಗಿರುವ ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆಯಾಗಬೇಕು. ಹಸಿರು ಇರುವ ಕಡೆ ಶುದ್ಧ ಗಾಳಿ ದೊರೆತು ಆರೋಗ್ಯಪೂರ್ಣ ಉಸಿರಾಟಕ್ಕೆ ಸಹಕಾರಿ ಆಗಲಿದೆ. ಹೀಗಾಗಿ ಪ್ರತಿಯೊಬ್ಬರೂ ಮನೆ ಸುತ್ತ ಉತ್ತಮ ಪರಿಸರ ನಿರ್ಮಾಣಕ್ಕಾಗಿ ಮನೆಗೊಂದು ಸಸಿ ನೆಟ್ಟು ಮರವಾಗಿ ಬೆಳೆಸುವ ಜವಾಬ್ದಾರಿ ನಿಭಾಯಿಸಬೇಕು ಎಂದು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಕುಲಸಚಿವೆ ಆರ್. ಸುನಂದಮ್ಮ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಜೈವಿಕ ಸಂಶೋಧನೆ, ಮಾಹಿತಿ ಮತ್ತು ಪ್ರಾತ್ಯಕ್ಷಿಕ ಕೇಂದ್ರ ಹಾಗೂ ವಿಜಯಪುರ ಲಯನ್ಸ್ ಕ್ಲಬ್ ಪರಿವಾರಸಹಯೋಗದಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಜೈವಿಕ ಇಂಧನ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜೈವಿಕ ಇಂಧನ ಸಂಬಂಧಿತ ಸಸ್ಯಗಳಾದ ಹೊಂಗೆ, ಸೀಮಾರೂಪಾ ಮತ್ತು ಜತ್ರೋಪಾ ಸಸ್ಯಗಳನ್ನು ನೆಡುವುದರಿಂದ ಜೈವಿಕ ಇಂಧನ ಉತ್ಪಾದನೆ ಹಾಗೂ ಬಳಕೆ ಸಾಧ್ಯವಾಗಲಿದೆ. ಇದರಿಂದ ರೈತರಿಗೆ ಹೆಚ್ಚಿನ ಅನುಕೂಲಕವಾಗಲಿದೆ. ಲಯನ್ಸ್ ಪರಿವಾರ ನಮ್ಮೊಂದಿಗೆ ಈ ಮಹತ್ವಪೂರ್ಣ ಕಾರ್ಯಕ್ರಮಕ್ಕೆ ಕೈ ಜೋಡಿಸಿರುವುದು ಶ್ಲಾಘನೀಯ ಎಂದರು.

ಲಯನ್ಸ್ ಪರಿವಾರದ ಅಧ್ಯಕ್ಷ ಡಾ। ಬಾಬುರಾಜೇಂದ್ರ ನಾಯಕ ಮಾತನಾಡಿ, ಪರಿಸರಕ್ಕೆ ಮಾರಕವಾದ ನಿತ್ಯ ಜೀವನದಲ್ಲಿ ಅನಿವಾರ್ಯವಾಗಿ ಬಳಸುವ ಪ್ಲಾಸ್ಟಿಕ್ ಬಳಕೆಯನ್ನು ತಗ್ಗಿಸಬೇಕಿದೆ. ಪ್ಲಾಸ್ಟಿಕ್ ಬಳಕೆಯಿಂದ ನಮ್ಮ ಪರಿಸರವನ್ನು ನಾವೇ ನಾಶ ಮಾಡುವ ಪರಿಸ್ಥಿತಿ ಉಂಟಾಗಿದೆ. ಪರಿಸ್ಥಿತಿ ಹೀಗೆ ಮುಂದುವರಿದರೆ ಭವಿಷ್ಯದ ಪೀಳಿಗೆಗೆ ಅಪಾಯಕರ ಪರಿಸ್ಥಿತಿ ನಿರ್ಮಾಣವಾಗಲಿದೆ. ಹೀಗಾಗಿ ಸಮಾಜದಲ್ಲಿಪ್ಲಾಸ್ಟಿಕ್ ಬಳಕೆ ಅಪಾಯದ ಕುರಿತು ಅರಿವು ಮೂಡಿಸಬೇಕಿದೆ. ಜೊತೆಗೆ ಪರಿಸರ ಸಂರಕ್ಷಣೆಗಾಗಿ ಸಸಿಗಳನ್ನು ನೆಟ್ಟು ಮರಗಳನ್ನಾಗಿ ಬೆಳೆಸುವ ಕುರಿತು ಅದರಲ್ಲೂ ಜೈವಿಕ ಇಂಧನ ಸಂಬಂಧಿ ಸಸಿಗಳು ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ಹೇಳಿದರು.

ಸಂಘಟನೆ ಪ್ರಮುಖರಾದ ಶ್ರವಣಕುಮಾರ ಮಹೇಂದ್ರಕುಮಾರ, ಮೋಹನ ಚವ್ಹಾಣ, ಡಾ। ಬಾಬು ಲಮಾಣಿ, ಫಯಾಜ್ ಕಲಾದಗಿ, ಎ.ಎಸ್. ಕುಲಕರ್ಣಿ, ಎಚ್.ಎ. ಕಲಾದಗಿ, ಎಸ್.ಎಸ್. ಗಂಗನಳ್ಳಿ, ಎಂ.ಬಿ. ರಜಪೂತ, ಸಿ.ಎಸ್. ನಿಂಬಾಳ, ಸತ್ಯಕಾಮ ಕಟ್ಟಿ ಚಂದ್ರಶೇಖರ ಜಾಧವ, ಕವಿತಾ ಜಹಗೀರದಾರ, ಸುನೀಲ ನಾಯಕ, ಸರಸ್ವತಿ ಮಹೇಂದ್ರಕರ, ಶ್ರೀಧರ ಮಹೇಂದ್ರಕರ, ರೆಹಮಾನ್ ಶಾನ್‌ವಾಲೆ ಇದ್ದರು. ಡಾ। ಅಶೋಕ ಜಾಧವ ನಿರೂಪಿಸಿದರು.

Event : International Biodiesel Day celebration.
Date : 18/8/2021, Udayavani, p. 2
KSWU

7.3

ಉದಯವಾಣಿ ದಿನಾಂಕ 05-11-2018

ಜೈವಿಕ ಇಂಧನ ವಿನಾಟರಣ

ಪುಟ - 2

7.3.1 (2B)

Event: Biofuel Day

Date: 5/11/2018

Udayavani

Page No: 2

Dep: Biofuel Processing Unit

RR:

ಪರಿಸರ ಸ್ನೇಹಿ ಅಕ್ಕಮಹಾದೇವಿ ಮಹಿಳಾ ವಿವಿ

■ 2010 ರಲ್ಲಿ ಜೈವಿಕ ಇಂಧನ ಉತ್ಪಾದನಾ ಘಟಕ ಸ್ಥಾಪನೆ ■ ವಿಶ್ವವಿದ್ಯಾಲಯ ವಾಹನಗಳಿಗೆ ಜೈವಿಕ ಇಂಧನ ಬಳಕೆ

■ ಜಿ.ಎಸ್. ಕಮತರ

ವಿಜಯಪುರ: ಉತ್ತರ ಕರ್ನಾಟಕದ ವಿಜಯಪುರ ಜಿಲ್ಲೆಯಲ್ಲಿರುವ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಸದ್ದಿಲ್ಲದೇ ಪರಿಸರ ಸ್ನೇಹಿ ಕೆಲಸದಲ್ಲಿ ತೊಡಗಿಸಿಕೊಂಡಿದೆ. ವಿವಿಧ ಜೈವಿಕ ಎಣ್ಣೆ ಇಂಧನ ಹಾಗೂ ಅದರ ಉಪ ಉತ್ಪನ್ನಗಳನ್ನು ಉತ್ಪಾದಿಸುವ ಮೂಲಕ ನಾಡಿಗೆ ಉತ್ತಮ ಸೇವೆ ನೀಡುತ್ತಿದೆ.

ಭಾರತದ ರಾಷ್ಟ್ರಪತಿಗಳಾಗಿದ್ದ ಡಾ। ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಆಶಯದಂತೆ ರಾಜ್ಯ ಸರ್ಕಾರ ದಶಕದ ಹಿಂದೆ ಜೈವಿಕ ಇಂಧನ ಕಾರ್ಯಪಡೆ ರಚಿಸಿದ್ದಲ್ಲದೇ, 2009ರಲ್ಲಿ ಜೈವಿಕ ಇಂಧನ ನೀತಿಯನ್ನೂ ಜಾರಿಗೆ ತಂದಿದೆ. ಆದಾದ ಮರು ವರ್ಷವೇ ಕರ್ನಾಟಕ ರಾಜ್ಯ ಜೈವಿಕ ಇಂಧನ ಮಂಡಳಿಯನ್ನೂ ಸ್ಥಾಪಿಸಿ ರಾಜ್ಯದಲ್ಲಿ ಜೈವಿಕ ಇಂಧನ ಉತ್ಪಾದನೆಗೆ ಪೂರಕ ಪರಿಸರ ನಿರ್ಮಾಣಕ್ಕೆ ಕಾರ್ಯೋನ್ಮುಖವಾಗಿದೆ. ಇದರ ಭಾಗವಾಗಿ ಕಳೆದ ಆರೇಳು ವರ್ಷಗಳ ಹಿಂದೆ ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ತಾನೂ ಕೂಡ ಪರಿಸರ ರಕ್ಷಣೆಗಾಗಿ ತನ್ನ ಕೊಡುಗೆ ನೀಡಲು ಮುಂದಾಗಿದೆ.

ವಿಶ್ವವಿದ್ಯಾಲಯದ ಆವರಣದಲ್ಲಿಯೇ 2010ರಲ್ಲಿ ಜೈವಿಕ ಇಂಧನ ಹಾಗೂ ಜೈವಿಕ ಉಪ ಉತ್ಪನ್ನಗಳ ಉತ್ಪಾದನೆ ಕೇಂದ್ರವನ್ನು ತೆರೆದಿದೆ. ಇದರ ನಿರ್ವಹಣೆಗೆ ಓರ್ವ ಸಂಯೋಜಕರನ್ನು ನೇಮಿಸಿದ್ದು ಕೇಂದ್ರದಲ್ಲಿ ತಾಂತ್ರಿಕ ಸಲಹೆ, ವೈಜ್ಞಾನಿಕ ಸಹಾಯಕರು ಸೇರಿದಂತೆ ನಾಲ್ವರು ಸಿಬ್ಬಂದಿ ಇದ್ದು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಈ ಸಿಬ್ಬಂದಿ ವೇತನ ಭರಿಸುತ್ತದೆ. ಇದಲ್ಲದೇ ರಾಜ್ಯ ಸರ್ಕಾರ ವಿಶ್ವವಿದ್ಯಾಲಯದ ಜೈವಿಕ ಇಂಧನ ಉತ್ಪಾದನಾ ಕೇಂದ್ರಕ್ಕೆ ಪ್ರತಿ ವರ್ಷ ಜೈವಿಕ ಉತ್ಪನ್ನಗಳ ಉತ್ಪಾದನೆಗಾಗಿ ಅನುದಾನ ನೀಡುತ್ತಿದೆ. ಕಳೆದ ಎರಡು ವರ್ಷಗಳಿಂದ ಸರ್ಕಾರದ ಅನುದಾನದ ಕೊರತೆ ಕಾರಣ ಸ್ಥಗಿತಗೊಂಡಿದ ಈ ಕೇಂದ್ರ ಇದೀಗ ಮತ್ತೆ ಆರಂಭಗೊಂಡಿದೆ.

ಹೊಂಗಿರಣ ಜಿಲ್ಲಾ ಜೈವಿಕ ಇಂಧನ ಮಳಿಗೆ ಹಾಗೂ ಪಡಗಾನೂರ ಸತ್ಯಮೇವ ಜಯತೇ ಸ್ತ್ರೀಶಕ್ತಿ ಮಹಿಳಾ ಸಂಘದಲ್ಲೂ ಜೈವಿಕ ಉತ್ಪನ್ನಗಳ ಉತ್ಪಾದನೆ ಮಾಡುತ್ತಿದ್ದರೂ ವಿಶ್ವವಿದ್ಯಾಲಯದ ಉತ್ಪಾದನೆಯೇ ಅಧಿಕ ಪ್ರಮಾಣದಲ್ಲಿದೆ.

ಪ್ರಸಕ್ತ ಸಾಲಿನಲ್ಲಿ ಸರ್ಕಾರ ವಿವಿಧ ಮೂಲಗಳಿಂದ 3 ಲಕ್ಷ ರೂ. ಅನುದಾನ ನೀಡಿದೆ. ಈ ಅನುದಾನದಲ್ಲಿ ಈಗಾಗಲೇ ಹಾಸನ ಜಿಲ್ಲೆಯಿಂದ 37 ಸಾವಿರ ರೂ. ಮೌಲ್ಯದ 1 ಟನ್ ಹೊಂಗೆ ಬೀಜ ತರಿಸಲಾಗಿದ್ದು ಸ್ಥಳೀಯವಾಗಿ ಪ್ರತಿ ಟನ್‌ಗೆ 15 ಸಾವಿರ ರೂ.ನಂತೆ 8 ಟನ್ ಬೇವಿನ ಬೀಜ ಖರೀದಿಸಿ ಎರಡೂ ರೀತಿಯ ಎಣ್ಣೆ ಉತ್ಪಾದನೆನಡೆಸಿದೆ. ಬೇವಿನ ಎಣ್ಣೆಮಾತ್ರವಲ್ಲದೇ ಜೈವಿಕ ಇಂಧನವನ್ನೂ ಉತ್ಪಾದಿಸುತ್ತಿದ್ದು ವಿಶ್ವವಿದ್ಯಾಲಯದ ವಾಹನಗಳಿಗೆ ಶೇ. 20ರಷ್ಟು ಜೈವಿಕ ಇಂಧನ ಬಳಕೆ ಮಾಡುವ ಮೂಲಕ ಪರಿಸರ ಸ್ನೇಹಿ ವಿಶ್ವವಿದ್ಯಾಲಯ ಎನಿಸಿದೆ.

ಅಲ್ಲದೇ ಈ ಭಾಗದಲ್ಲಿ ಅಧಿಕ ಪ್ರಮಾಣದಲ್ಲಿ ಬೆಳೆಯುವ ದ್ರಾಕ್ಷಿ ಲಿಂಬೆ ಬೆಳೆಗಾರ ರೈತರು ಇಳುವರಿ ಹಾಗೂ ತೋಟಗಾರಿಕೆ ಮರಗಳ ಆರೋಗ್ಯ ರಕ್ಷಣೆ, ಬೆಳವಣಿಗೆ ಹೆಚ್ಚಳಕ್ಕೆ ಬೇವು ಹಾಗೂ ಹೊಂಗೆ ಎಣ್ಣೆ ಹಿಂಡಿ ಬಳಕೆಮಾಡುತ್ತಿದೆ. ಕಾರಣ ವಿಶ್ವವಿದ್ಯಾಲಯದಲ್ಲಿ ಉತ್ಪಾದನೆ ಆಗುತ್ತಿರುವ ಜೈವಿಕ ಉತ್ಪನ್ನಗಳಿಗೆ ಭಾರಿ ಬೇಡಿಕೆ ಬಂದಿದೆ. ಇದಲ್ಲದೇ ಕಳೆದ ವರ್ಷದಿಂದ ಬೇವಿನ ಸಾಬೂನು, ಫಿನಾಯಿಲ್, ಗ್ಲಿಸರಿನ್ ನಂಥ ಉಪ ಉತ್ಪನ್ನಗಳನ್ನು ಉತ್ಪಾದಿಸಲಾಗುತ್ತಿದೆ. ಈ ಉಪ ಉತ್ಪನ್ನಗಳಿಗೆ ದೊಡ್ಡ ಮಟ್ಟದಲ್ಲಿ ಮಾರುಕಟ್ಟೆ ಕಂಡುಕೊಂಡಿಲ್ಲ ಆದರೆ ಭವಿಷ್ಯದಲ್ಲಿ ಜನರ ಬಳಿಗೆ ಜೈವಿಕ ಉಪ ಉತ್ಪನ್ನಗಳನ್ನು ಕೊಂಡೊಯ್ಯುವ ಯೋಜನೆ ರೂಪಿಸಿದೆ.

ಹೊಂಗೆ ಎಣ್ಣೆ 80 ರೂ. ಲೀಟರ್ ಇದ್ದರೆ, ಬೇವಿನ ಎಣ್ಣೆ ಬೆಲೆ 200 ರೂ. ಇದೆ. ಲಾಭಕ್ಕಿಂತ ಪರಿಸರ ಸ್ನೇಹಿ ಕಾರ್ಯಕ್ರಮಗಳ ಜಾಗೃತಿಗಾಗಿ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಉಪ ಉತ್ಪನ್ನಗಳ ಬೆಲೆ ಕೂಡ ಮುಕ್ತ ಮಾರುಕಟ್ಟೆಗಿಂತ ಕಡಿಮೆ ಇರಿಸಾಗಿದೆ ಎಂಬುವು ವಿಶ್ವವಿದ್ಯಾಲಯದ ಜೈವಿಕ ಇಂಧನ ಹಾಗೂ ಮಾಹಿತಿ ಕೇಂದ್ರ ವೈಜ್ಞಾನಿಕ ಸಹಾಯಕ ಸಂಗನಾಥ ಗಾಣಗೇರ ಹೇಳುತ್ತಾರೆ.

ಇದಲ್ಲದೇ ವಿಶ್ವವಿದ್ಯಾಲಯದ ಆವರಣದಲ್ಲಿ ಸಾವಿರಾರು ಹೊಂಗೆ, ಬೇವು, ಜತ್ರೋಪಾದಂಥ ಮರಗಳನ್ನು ಬೆಳೆದಿದ್ದು ಇದೀಗ ಕೆಲವು ಮರಗಳು ಇಳುವರಿ ನೀಡಲಾರಂಭಿಸಿವೆ. ವಿಜಯಪುರ ಸೇರಿ ಉತ್ತರ ಕರ್ನಾಟಕ ಭಾಗದಲ್ಲಿ ಅಕ ಪ್ರಮಾಣದಲ್ಲಿ ಬೇವು ಬೆಳೆಯುತ್ತಿದ್ದು ಬಂಜರು ಭೂಮಿಯಲ್ಲಿ ಅರಣ್ಯ ಕೃಷಿಗಾಗಿ ಬೇವಿನ ಬೆಳೆ ಬೆಳೆಯಲು ರೈತರನ್ನು ಪ್ರೋತ್ಸಾಹಿಸುವ ಗುರಿ ಹಾಕಿಕೊಂಡಿದೆ. ಅಲ್ಲದೇ ಭವಿಷ್ಯದ ಪೀಳಿಗೆಗೆ ಜೈವಿಕ ಸಸ್ಯಗಳ ಬೆಳೆ, ಜೈವಿಕ ಉತ್ಪನ್ನಗಳ ಬಳಕೆ ಕುರಿತು ಮನವರಿಕೆ ಮಾಡಿಕೊಡಲು ಶಾಲಾ ಮಕ್ಕಳ ಬಳಿಗೆ ತೆರಳಲು ಯೋಜಿಸಿದೆ. ಇದಕ್ಕಾಗಿ ಬೇವಿನ ಹಣ್ಣು ಬಿಡುವ ಬೇಸಿಗೆ ಶಾಲೆಗಳ ರಜಾ ದಿನಗಳಲ್ಲಿ ಮಕ್ಕಳು ಬೇವಿನ ಬೀಜಗಳನ್ನು ಸಂಗ್ರಹಿಸಿ, ಕೊಂಡುಕೊಳ್ಳುವ ಕಾರ್ಯಕ್ರಮ ಹಮ್ಮಿಕೊಳ್ಳುವ ಗುರಿ ಇರಿಸಿಕೊಂಡಿದೆ.





ವಿಜಯಪುರ: ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಆವರಣದಲ್ಲಿರುವ ಜೈವಿಕ ಇಂಧನ ಸಂಸ್ಕರಣಾ ಘಟಕದ ಒಳ ನೋಟ.



ವಿಜಯಪುರ: ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಆವರಣದಲ್ಲಿರುವ ಜೈವಿಕ ಇಂಧನ ಸಂಸ್ಕರಣಾ ಘಟಕ.

● ವಿಶ್ವವಿದ್ಯಾಲಯದ ಆವರಣದಲ್ಲಿ ವಿವಿಧ ಜೈವಿಕ ಇಂಧನ ಮರಗಳನ್ನು ಬೆಳೆದಿದ್ದು ಪ್ರಸಕ್ತ ವರ್ಷ ಬೇವಿನ ಮರಗಳು ಇದೀಗ ಫಲ ನೀಡುತ್ತಿದ್ದು ಕಳೆವ ವರ್ಷ ಸುಮಾರು 1 ಕ್ವಿಂಟಲ್ ಬೀಜ ಸಿಕ್ಕಿದೆ. ಭವಿಷ್ಯದ ವರ್ಷಗಳಲ್ಲಿ ಹೆಚ್ಚಿನ ಬೀಜ ದೊರೆಯುವ ನಿರೀಕ್ಷೆ ಇದೆ.

● ರೂಪಾ ಕೆ. ಮತ್ತಿಕೆರೆ, ಸಂಯೋಜಕಿ ಜೈವಿಕ ಇಂಧನ ಸಂಸ್ಕರಣಾ ಘಟಕ, ಅಕ್ಕಮಹಾದೇವಿ ಮಹಿಳಾ ವಿವಿ ವಿಜಯಪುರ



A Report of the Training Programme

The Chairman, Department of Studies in Education, Karnataka State Akkamahadevi Women's University, Vijayapura had sent a letter on 07.02.2022,with a request to provide 'Paper Recycling' training to 15 students of B.Ed. II semester. As per his request, the training in paper recycling technology was provided to them. Following are the details of the training provided:

The training programme for the students started on 08.02.2022. I, Akshay Yardi, Coordinator, Paper Recycling Unit, KSAWU welcomed the students to the training programme which was supposed to be conducted for a week. I spoke on the importance and need for paper recycling in the present times and requested the staff members of the unit Shri Dayanand, Shri Ramesh Hiremath and Smt. Meenakshi Jolad to provide the students with practical training in the techniques of paper recycling. After this introductory address, the students were trained in the Paper Recycling unit for a period of four days between 08.02.2022 and 18.02.2022. Since the training was carried out by utilizing the resources, and through the staff members already working in the Paper Recycling Unit, there was no expenditure involved in this programme.

Particulars of the Training Programme:

Day	Date	Particulars of the Training
01	08.02.2022	Students were provided information regarding the collection of waste papers and sorting. Explanation with practical training regarding the process of soaking the waste papers, card-boards in a chemical mix was given to the students. Students were made to do this work by themselves under the supervision of the staff members. Further, the students were taught how to prepare sheets out of this chemical mixture and how to dehydrate those sheets to get a dry sheet of the matter.
02	16.02.2022	Students could not attend the training for a period of 7 days as their classes were closed as per the circular from the Government of Karnataka. Hence, soon after the recommencement of classes on 16th February, the students resumed their training in Paper Recycling Unit. They were taught how to give a good texture and a finishing touch to the dried sheets and how to cut them into proper size and shape using machines.
03	17.02.2022	On this third day of the training programme, the students

		were taught how to prepare files out of the sheets and how to stick cloth and affix highlight rings at the borders of each file.
04	18.02.2022	On this final day of the training, the students were taught how to prepare carry bags from the prepared sheets. Students prepared carry-bags by themselves and thus felt that their training was useful because they learnt a new skill and understood the significance of paper recycling technology.

Enclosures:

1) Some photographs of the students involved in thetraining programme
2) Photocopy of Students' Feedback on the Training Programme is also attached herewith

ಸೀಟ್ ತಯಾರಿಸುವದು (ಪೇಪರ)




ಕೈರಿ ಬ್ಯಾಗ್ ತಯಾರಿಸುವ ಮಾಹಿತಿ


ಕೈರಿ ಬ್ಯಾಗ ಮಾಡುತ್ತಿರುವದು


ಫೈಲಿಗೆ ಹೈಲೆಟ್ ರಿಂಗ್ ಹಚ್ಚುತ್ತಿರುವದು

ದಿನಾಂಕ 08-02-2022 ರಂದು ತಾಲೂಕು ಮಟ್ಟದಲ್ಲಿ ಕ್ರೀಡಾಕೂಟದಲ್ಲಿ ಪಾಲ್ಗೊಂಡ ವಿದ್ಯಾರ್ಥಿನಿಯರ ಹಾಜರಾತಿ.

ಕ್ರ ಸಂ	ವಿದ್ಯಾರ್ಥಿನಿಯರ ಹೆಸರು	08-02-22	09-02-22	10-02-22	11-02-22	14-02-22
			16-02-22	17-02-22	18/2/22	
1)	Geeta Bajabalakar	Geeta	Geeta	Geeta	Geeta	
2)	Mahananda S. Dashyal	MSD	MSD	MSD	MSD	
3)	Jyothi. M.	Jyothi	Jyothi	Jyothi	Jyothi	
4)	Jyothi. P	Jyothi	Jyothi	Jyothi	Jyothi	
5)	Sana Banu. Bilagi	Bilagi	Bilagi	Bilagi	Bilagi	
6)	Gangamma. S.	[illegible]	A	[illegible]	[illegible]	
7)	Mallamma. Kumbar	MSD	A	MSD	MSD	
8)	Bhuvaneshwari Basaval	B.S. Basaval	A	B.S. Basaval	B.S. Basaval	
9)	Madhuri. k	A	A	A	A	
10)	Imambi Sipai	A	A	A	A	
11)	Rakshita Nayak	A	A	A	A	
12)	Saralakka	A	A	A	A	
13)	Shruti	A	A	A	A	
14)	Veeramma	A	[illegible]	[illegible]	[illegible]	
15)	Yasmeen	A	[illegible]	[illegible]	A	



1) ಮಾನವಂತ. ಎಸ್. ಗಾಣಿಗ -

ಕಳ್ಳ ಮೇಷನ ಎದುರು ಉತ್ತಮನೆಯ ಕಂತು ಮೆಚ್ಚಲು ಏಮಿಲಿ ಕಂಯಿರ ಎಂಬಂತಿ ಇರಿಲ್ಲ. ಇಲ್ಲ ಬಂಡ ಬಾಳಿಕೆ ಕಿಟ್ಟು/ಕಾಳಾರ ಮೇಲಿನ ಅನ್ನ, ಮೊನ ಉತ್ತಮಿಸುವಿಕೆ ಹೆಂಗೆ ಎಂತು ಅಕಂಡ ಕ್ಷೇಮ, ಕ್ಷೇಗನ, ಮುಂತಾದ ಎನ್ನುಳ್ಳಿನ್ನ ನಿಕ್ಷಿ ಎಕಿನಿಂದ ಕೈಕಿಲ್ಯಕ್ಕಿ ಕಂತು ಇಲ್ಲ ಬಾಡಬಾಳಿಕೆ ನಾಕಿಕ್ಷಿ ಮೊಂಟಂಬುನ್ನ ಎಕಿಮಿಕೊಂಡು ಕಿಲತೆಂಲ್ರ. ಇಲ್ಲಂದು ನಿಬ್ಬಂಬಗೆ ಎಂತು ಎಘಾನದ ಕೊಂಸೆಟರ ನೆರ ಅಂಬೆರು ನೆಂದು ಲಂಕೆದು ತೆರು ತೆರಿಯೇತಿ ಬಾಳೆ ನಿಸಿಕಾರಿಲ್ಲೆನ್ನ ನೀಡಿದ್ದೆರು. ಎಲ್ಲ ನಿಬ್ಬಂಬನು ಮಿತ್ತಿ ನೆರ ಅಂಬಗೆ ಧನ್ಯವಾದಗಳು.

2) ಗೀತಾ. ಬಂ. ಬಡುಬಳಕೆರ

ಕಳ್ಳ ಮೇಷರ ಉತ್ತಮ ಬಳಕೆಯಾದ ಮೆಸರ -ನ್ನು ಬನಿಂದ ಮಾಲ್ಯ. ಮಾಡುವೆವಕ್ಕಂತ ಅದನ್ನು ಈ ಅಂತ -ಯಾಗಿ ಬಳಕೆ ಮಾಡಿಕೊಂಡು ಉಪಯುಕ್ತ ಮಾಡಿ -ಕೊಳ್ಳುವುದು ತುಂಬಾ ಮುಖ್ಯವಾಗುತ್ತದೆ. ಈ-ರೀತಿ -ಯಾದ ಪೆಸರ ಮರುಬಳಕೆಯ ಮೂಲಕ ನಮ್ಮ ಉತ್ಪನ್ನಗಳಲ್ಲಿರುವುದು ನಮ್ಮ ಹೆಮ್ಮೆ. ಇದು ಮುಂದೆ ಪರಿಸರ ಸ್ನೇಹಿ ಕ್ರಿಯೆಗಳನ್ನು ಕೈಗೊಳ್ಳಲು ಇಲ್ಲಿನ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿ ನೀಡುತ್ತದೆ. ಇಂತಹ ಉತ್ತಮವಾದ ಒಂದು ಅನುಭವ ಮತ್ತು ತರಬೇತಿ ನೀಡಿದ್ದಕ್ಕೆ ಇಲ್ಲಿನ ನಿಬ್ಬಂದಿ ಮತ್ತು ವ್ಯವಸ್ಥಾಪಕರಿಗೆ ಧನ್ಯವಾದಗಳು.

5) ಚೆಕ್ಕಲೆ P

ಮರಗಳನ್ನು ತೆಗೆದು ತೆಂಗು ಕಾಗದವನ್ನು ತಯಾರು ಮಾಡುವುದನ್ನು ಕೇಳಿದ್ದೇವೆ. ಆದರೆ ಇಲ್ಲಿ ತೆಳ್ಳಗೆ ಕಾಗದಗಳನ್ನು ಒಟ್ಟಿಗೆ ಇಟ್ಟು ಅದನ್ನು ದಿಣ್ಣೆ ಕಾಗದಗಳನ್ನಾಗಿ ಮಾಡುವಿದರಿಂದ ಒಳ್ಳೆಯ ಮಿಶ್ರಣಗಳು ಬರುತ್ತೆ. ಮೊದಲು ನಾನಾರಂದ ಗಾಳಿ ಬೀಸಿ ಮರಗಳು ಅಲುಗಾಡಿದ ಹಾ, ಮನಾಕ್ಷಿ ಮೊದಲು ನಾವೆಲ್ಲರು ಕೂಡಿ ತಯಾರಿಸಲಿಕ್ಕೆ ಅವರಿಂದ ಗಾಳಿಯ ಬಗೆಯ ಬಗೆಯಾದರೆ ಪಕ್ಷಿಗಳನ್ನು ಕೂಡಿ ಮಾಡಲಿಕ್ಕೆ ತೆಗೆದಿದರು, ಇದು ನಮಗೆ ಕೂಡ ಉಪಯೋಗಕ್ಕೆ. ಅಂದಾ ಇದರಿಂದ ತೆಗೆದುಕೊಳ್ಳಬೇಕು.

6) ಚೆಕ್ಕಲೆ - M.

ತಾಗದದ ಮನೆಯುತ್ಪಾದನೆಯನ್ನು ಹೇಗೆ ಮಾಡುವುದನ್ನು ತಿಳಿಸಿಕೊಟ್ಟರು. ಇಲ್ಲಿ ನಮಗೆ ಅಂದರೆ ತೆಗೆದುಕೊಳ್ಳಬೇಕು. ಕೈಯಿಂದ ಮಾಡುವುದು, ಬ್ಯಾಗ್ ಮಾಡುವುದನ್ನು ತಿಳಿದುಕೊಳ್ಳಬೇಕು. ಮೀನಾಕ್ಷಿ ಮೇಡಂ ದಂಪತಿಗಳಿಗೆ, ರಮೇಶ್ ಸರ್ ನಮಗೆ ತಿಳಿಸಿಕೊಟ್ಟರೆ ಅಂತೆಯೆ ನನ್ನ ಕಡೆಯಿಂದ ಧನ್ಯವಾದಗಳು.

(7) ಗಂಗಮ್ಮ - S.

ಮರಗಳನ್ನು ತೆಗೆದು ತಾಗದದ ಉತ್ಪಾದನೆಯ ಬಗ್ಗೆ ತಿಳಿಸಿಕೊಟ್ಟರು. ಅದರ ತೆಳ್ಳನೆ ಅಳತೆಯನ್ನು ಬಳಸಿ ಮೈನ ಅಳತೆಯನ್ನು ತಯಾರು ಮಾಡುವುದು ಮತ್ತು ಮೀನಾಕ್ಷಿ ಮೇಡಂ ಈ ಉದ್ಯಾನಕ್ಕೆ ತಾಗದಗಳನ್ನು ಎರವಲು ತೆಗೆದುಕೊಳ್ಳುವುದನ್ನು ನಾವು ಕೇಳಿದ್ದೆವೆ. ಇದರಿಂದ ನಮಗೆ ತೆಂಗಿನ ಕಾಯಿಯಾಯಿತು. ಈ ಉದ್ಯಾನದ ರಮೇಶ ಸರ್ ಮೊಕ್ಕಿ ಕಯೋನಂದ ಸರ್ ಕಾರು ಮೀನಾಕ್ಷಿ ಮೇಡಂ ರವರು ನಮಗೆ ತೆಗೆದು ಹೇಳಿಕೊಟ್ಟರು. ಕೆಲಸ ನಮ್ಮ ಕೈಯಿಂದ ಪ್ರಯತ್ನಿಸಿದೆವು.

ಸಂಯುಕ್ತ ಕರ್ನಾಟಕ, ದಿ.21/2/22. ಪುಟ-09.

ನಾಳೆಯಿಂದ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮ

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಜೈವಿಕ ಮಾಹಿತಿ, ಜೈವಿಕ ತಂತ್ರಜ್ಞಾನ, ಸಸ್ಯಶಾಸ್ತ್ರ ವಿಭಾಗ ಹಾಗೂ ಕರ್ನಾಟಕ ಕೌಶಲ್ಯ ವಿಜ್ಞಾನ ಕಾರ್ಯಕ್ರಮ ಸಹಯೋಗದಲ್ಲಿ ಫೆ.21 ರಿಂದ ಒಂದು ತಿಂಗಳ ಅಣಬೆ ಕೃಷಿ ಮತ್ತು ಸಂರಕ್ಷಿತ ಪುಷ್ಪ ಕೃಷಿಯಲ್ಲಿ ವಾಣಿಜ್ಯೋದ್ಯಮ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರವನ್ನು ಬೆಂಗಳೂರಿನ ಐಐಎಚ್‌ಆರ್ ಸಂಸ್ಥೆಯ ವಿಜ್ಞಾನಿ ಡಾ. ಚಂದ್ರಶೇಖರ್ ಸಿ ಉದ್ಘಾಟಿಸಲಿದ್ದು, ಮಹಿಳಾ ವಿವಿಯ ಕುಲಸಚಿವ ಎಂ.ಎನ್. ಚೋರಗಸ್ತಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ವಿವಿಯ ಕುಲಪತಿ ಪ್ರೊ. ಬಿ.ಕೆ. ತುಳಸಿಮಾಲ ಅಧ್ಯಕ್ಷತೆ ವಹಿಸಲಿದ್ದು, ಕಾರ್ಯಕ್ರಮದಲ್ಲಿ ಮಹಿಳಾ ವಿವಿಯ ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು ಭಾಗವಹಿಸಲಿದ್ದಾರೆ ಎಂದು ಕಾರ್ಯಕ್ರಮ ಸಂಯೋಜಕ ಡಾ. ಬಾಬು ಲಮಾಣಿ ಹಾಗೂ ಸಹ ಸಂಯೋಜಕ ಡಾ. ಜಾಯ್ ಹೋಸಕೇರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Event : Skilled development Programme.
Date : 21/2/2022, Samyukta Ka Karnataka, Page 9
Dept : Botany department
Resource person : M.N. Chorghasti

Registrar office 21/02/22 | IQAC | VCPS 21-02-22

ದಿನಪತ್ರಿಕೆ ಪ್ರಭಾ, ದಿ. 23/2/22, ಪುಟ-02

ಮಾಹಿತಿ... ವಾಣಿಜ್ಯೋದ್ಯಮ ಕೌಶಲ ಅಭಿವೃದ್ಧಿ ಕಾರ್ಯಕ್ರಮ

ಅಣಬೆ ಲಾಭದಾಯಕವಾದ ಬೆಳೆ

ವಿಜಯಪುರ: ಅಣಬೆ ಕೃಷಿ ಮತ್ತು ಸಂರಕ್ಷಿತ ಪುಷ್ಪ ಕೃಷಿಯಲ್ಲಿ ಸುಮಾರು 20ಕ್ಕೂ ಹೆಚ್ಚು ತಂತ್ರಜ್ಞಾನಗಳನ್ನು ಬಳಸಿದ್ದು, ಇಂದು ಅದು ವಾಣಿಜ್ಯೋದ್ಯಮವಾಗಿ ಬೆಳೆಯುತ್ತಿದೆ ಎಂದು ಬೆಂಗಳೂರಿನ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯ ಹಿರಿಯ ವಿಜ್ಞಾನಿ ಡಾ. ಚಂದ್ರಶೇಖರ.ಸಿ. ಹೇಳಿದರು.

ಸೋಮವಾರ ಇಲ್ಲಿಯ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಜೈವಿಕ ಮಾಹಿತಿ, ಜೈವಿಕ ತಂತ್ರಜ್ಞಾನ ಮತ್ತು ಸಸ್ಯಶಾಸ್ತ್ರ ವಿಭಾಗ, ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆ ಹಾಗೂ ಕರ್ನಾಟಕ ನಾವಿನ್ಯತೆ ತಂತ್ರಜ್ಞಾನ ಸಂಸ್ಥೆಯ ಅನುದಾನದಡಿಯಲ್ಲಿ ಆಯೋಜಿಸಿದ್ದ ಒಂದು ತಿಂಗಳ ಅಣಬೆ ಕೃಷಿ ಮತ್ತು ಸಂರಕ್ಷಿತ ಪುಷ್ಪಕೃಷಿಯಲ್ಲಿ ವಾಣಿಜ್ಯೋದ್ಯಮ ಕೌಶಲ ಅಭಿವೃದ್ಧಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಶಿಬಿರಾರ್ಥಿಗಳಿಗೆ ಅಣಬೆ ಕೃಷಿ ಮಹತ್ವ ಮತ್ತು ಆರ್ಥಿಕ ಲಾಭಗಳು ಬಗ್ಗೆ ವಿಸ್ತಾರವಾಗಿ ತಿಳಿಸಿದರು ಹಾಗೂ ಅಣಬೆಯಿಂದ ವಿವಿಧ ಪದಾರ್ಥಗಳನ್ನು ತಯಾರಿಸುವ ಬಗ್ಗೆ ಹಾಗೂ ಅಣಬೆ ರೋಗಗಳ ನಿಯಂತ್ರಣ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ



ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲ, ಉದ್ಯಮಶೀಲತ್ವ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಲು ಇದು ಸಹಕಾರಿಯಾಗಿದೆ. ಇಂದಿನ ದಿಮಾನಗಳಲ್ಲಿ ಅಣಬೆ ಕೃಷಿ ಲಾಭದಾಯಕ ಉದ್ಯೋಗವಾಗಿ ಪರಿವರ್ತನೆ ಆಗುತ್ತಿದೆ ಎಂದರು. ಅಲಂಕಾರಿಕ ಪುಷ್ಪಗಳು ಹಸಿರು ಉದ್ಯೋಗ ಅವಕಾಶಗಳನ್ನು ಸೃಷ್ಟಿಸುತ್ತದೆ ಹಾಗೂ ಅಣೆಬೆಯ ಕೃಷಿ ಮಾಡುವದರಿಂದ ರೈತರು ಆರ್ಥಿಕವಾಗಿ ಸಬಲರಾಗ ಬಹುದು ಎಂದರು. ಕುಲ ಸಚಿವ ಎಮ್.ಎನ್. ಚೋರಗಸ್ತಿ, ಕಾರ್ಯಕ್ರಮದ ಸಹ ಸಂಯೋಜಕ ಡಾ.ಜಾಯ್ ಹೊಸಕೇರಿ ಇದ್ದರು. ತರಬೇತಿ ಕಾರ್ಯಾಗಾರದ ಸಂಯೋಜಕ ಡಾ. ಬಾಬು.ಆರ್.ಎಲ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಡಾ. ಆರತಿ ಲದ್ದಿಮಠ ನಿರೂಪಿಸಿದರು. ಡಾ. ಅಜರ ದಫೇದಾರ ಅತಿಥಿಗಳನ್ನು ಪರಿಚಯಿಸಿದರು. ಶ್ವೇತಾ ಮೆಣಸಿಗಿ ವಂದಿಸಿದರು.

Registrar Office — 23/02/22

VC Office — 23-02-22

IQAC — V.B.P.

Event: Mushroom Culture Workshop

Date: 23/2/2022, Kannada prabha Page-2

Dept: Botany department

Resource Person: Dr. Chandrashekar. C

7.3

ಪ್ರಜಾವಾಣಿ ದಿ. 25-2-21 ಪುಟ-2

ಮಹಿಳಾ ವಿವಿಯಲ್ಲಿ ಫ್ರೂಟ್ ಡೇ ಆಚರಣೆ

ಔಷಧ ಗುಣವುಳ್ಳ ಹಣ್ಣುಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ

ವಿಜಯಪುರ: ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗದಲ್ಲಿ ಸೈನ್ಸ್ ವೀಕ್ ಪ್ರಯುಕ್ತ ಹಮ್ಮಿಕೊಂಡಿದ್ದ ಫ್ರೂಟ್ ಡೇ ಪ್ರದರ್ಶನ ಕಾರ್ಯಕ್ರಮದಲ್ಲಿ ಸಸ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯರು ಅತ್ಯಮೂಲ್ಯವಾದ ಔಷಧ ಗುಣ ಹೊಂದಿದ ಸಸ್ಯ ಮತ್ತು ಹಣ್ಣುಗಳನ್ನು ಪ್ರದರ್ಶನದಲ್ಲಿಡುವುದರ ಜೊತೆಗೆ ಅವುಗಳ ಬಗ್ಗೆ ವಿವರಣೆ ನೀಡಿದರು.

ಸಸ್ಯಶಾಸ್ತ್ರ ವಿಭಾಗದ ಸಂಯೋಜಕ ಬಾಬು ಎಲ್ ಮಾತನಾಡಿ, 'ಫ್ರೂಟ್ ಡೇ ಅತ್ಯದ್ಭುತವಾದ ಪ್ರದರ್ಶನವಾಗಿದ್ದು, ವಿದ್ಯಾರ್ಥಿನಿಯರು ಅತ್ಯಂತ ಹುಮ್ಮಸ್ಸಿನಿಂದ ಭಾಗಿಯಾಗಿರುವುದು ಖುಷಿ ತಂದಿದೆ' ಎಂದರು.

ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ವಿಭಾಗದಲ್ಲಿ ಸೈನ್ಸ್ ವೀಕ್ ಪ್ರಯುಕ್ತ ಫ್ರೂಟ್ ಡೇ ಪ್ರದರ್ಶನ ನಡೆಯಿತು

'ಫ್ರೂಟ್ ಡೇ ಪ್ರದರ್ಶನದಲ್ಲಿ ಅತ್ಯಮೂಲ್ಯವಾದ ಹಣ್ಣುಗಳನ್ನು ಮತ್ತು ನಮಗೆ ಸಿಗದಂತಹ ಮತ್ತು ಎಷ್ಟೋ ಜನರು ನೋಡದೆಯೇ ಇರದಂತಹ ಬಿಳಿ ಗೆಣಸು ಸೇರಿದಂತೆ ಹತ್ತು ಹಲವಾರು ವೈಶಿಷ್ಟ್ಯತೆಯನ್ನು ಹೊಂದಿದ ಹಣ್ಣು ಮತ್ತು ಸಸ್ಯಗಳನ್ನು ಇಡಲಾಗಿದೆ. ಅದರ ಪ್ರಯೋಜನಗಳ ಬಗ್ಗೆ ಸಹ ಎಲ್ಲರಿಗೂ ನೀವು ವಿವರಿಸುವ ಮೂಲಕ ಪ್ರತಿ ಹಣ್ಣಿನ ಮಹತ್ವದ ಬಗ್ಗೆ ಜಾಗೃತಿ ಮೂಡಿಸುತ್ತಿರುವುದು ಹೆಮ್ಮೆಯ ವಿಷಯ' ಎಂದರು.

ವಿವಿಧ ಔಷಧಿ ಗುಣದ ಸಸ್ಯಗಳ ಪ್ರದರ್ಶನ

ಹೃದಯ ರೋಗ ಸಂಬಂಧಿಗಾಗಿ ಮತ್ತು ಜೀರ್ಣಕ್ರಿಯೆ ಸರಿಯಾಗಲು ಬಳಸುವ ಕಕ್ಕೆ ಗಿಡ (ಬ್ಯಾಟಿಮರ), ಸಕ್ಕರೆ ಕಾಯಿಲೆಯನ್ನು ನಿವಾರಣೆ ಮಾಡುವ ಮಹಾಗನಿ (ಸ್ವೇಟಿನಿಯಾ), ಚರ್ಮರೋಗ ಮತ್ತು ಕ್ಷಯರೋಗಕ್ಕೆ ಮದ್ದಾದ ಹುಲಿ ನಖ (ಮಾರಟಿನಿಯಾ), ತಿನ್ನಲು ಬಲು ರುಚಿಯಾದ ಸ್ಟೆಕ್ರ್ಯೂಲಿಯಾ ಪೋಟಿಡಾ ಹಣ್ಣು ಸೇರಿದಂತೆ ಇನ್ನು ಹತ್ತಾರು ವಿಶಿಷ್ಟ ಸಸ್ಯಗಳನ್ನು ಪ್ರದರ್ಶನದಲ್ಲಿ ಇಡಲಾಗಿತ್ತು.

ಅತಿಥಿ ಉಪನ್ಯಾಸಕ ಡಾ.ಫಿರ್ದೋಸ್ ಕೋಲಾರ, ಆರತಿ ಲದ್ದಿಮಠ, ಪ್ರತಿಮಾ ಎಚ್, ಶಂಕರ್ ಸೇರಿದಂತೆ ವಿಭಾಗದ ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

Event : Exhibition on Medicinally valued fruits

Date : 25-2-21, Prajavani, Page 2.

Dept : Botany Department

Resource person : Babu. R. L

ಪ್ರಜಾವಾಣಿ - ದಿ. 19/02/2021 ಪು-3.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವುಮನ್ ಟೆಕ್ನಾಲಜಿ ಪಾರ್ಕ್ ಯಶೋಗಾಥೆ

'ಅಕ್ಕ'ನ ತೋಟದಲ್ಲಿ ರುಚಿಕರ 'ಸ್ಟ್ರಾಬೆರಿ'

• ಬಸವರಾಜ್ ಸಂಪಳ್ಳಿ

ವಿಜಯಪುರ: ನೆರೆಯ ಮಹಾರಾಷ್ಟ್ರದ ಮಹಾಬಲೇಶ್ವರದ ಬೆಟ್ಟಗುಡ್ಡದಿಂದ ಕೂಡಿದ ಸಮಶೀತೋಷ್ಣ ಪ್ರದೇಶದಲ್ಲಿ ಬೆಳೆಯುವ ಸ್ಟ್ರಾಬೆರಿಯನ್ನು ಬಿಸಿಲನಾಡು ವಿಜಯಪುರದಲ್ಲೂ ಬೆಳೆಯಬಹುದು ಎಂಬುದನ್ನು ಇಲ್ಲಿನ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವುಮನ್ ಟೆಕ್ನಾಲಜಿ ಪಾರ್ಕ್ ಸಿಬ್ಬಂದಿ ಸಾಧಿಸಿ ತೋರಿಸಿದ್ದಾರೆ.

ಹೌದು, ದ್ರಾಕ್ಷಿ, ಲಿಂಬೆ ಬೆಳೆಗೆ ಸೂಕ್ತವಾಗಿರುವ ವಿಜಯಪುರದ ಹವಾಮಾನದಲ್ಲಿ ಸ್ಟ್ರಾಬೆರಿ ಬೆಳೆಯುವುದು ಕಷ್ಟಸಾಧ್ಯ. ಆದರೆ, ವಿಶ್ವವಿದ್ಯಾಲಯದ ವುಮನ್ ಟೆಕ್ನಾಲಜಿ ಪಾರ್ಕ್ (ಮಹಿಳಾ ಕೌಶಲ ಪಾರ್ಕ್)ನ ಎರಡು ಪಾಲಿಹೌಸ್‌ಗಳಲ್ಲಿ ಯಶಸ್ವಿಯಾಗಿ ಸ್ಟ್ರಾಬೆರಿ ಬೆಳೆಯಲಾಗಿದ್ದು, ಸದ್ಯ ಕೊಯ್ಲಿಗೆ ಬಂದಿದೆ. ಈ ಮೂಲಕ ಮಹಿಳಾ ವಿಶ್ವವಿದ್ಯಾಲಯವು ಜಿಲ್ಲೆಯ ತೋಟಗಾರಿಕಾ ಕ್ಷೇತ್ರಕ್ಕೆ ಹೊಸ ಬೆಳೆಯನ್ನು ಪರಿಚಯಿಸಿದೆ.

ವಿಶ್ವವಿದ್ಯಾಲಯದ ಎಂ.ಎಸ್‌ಸಿ ಸಸ್ಯಶಾಸ್ತ್ರ, ಜೈವಿಕ ತಂತ್ರಜ್ಞಾನ, ಜೈವಿಕ ವಿಜ್ಞಾನ ವಿಭಾಗದ ವಿದ್ಯಾರ್ಥಿನಿಯರಿಗೆ ತರಬೇತಿ, ಸಂಶೋಧನೆ ನೀಡುವ ಉದ್ದೇಶದಿಂದ ಹಾಗೂ ಜಿಲ್ಲೆಯ ರೈತ ಮಹಿಳೆಯರಿಗೆ ತರಬೇತಿ ನೀಡುವ ಸದುದ್ದೇಶದಿಂದ ಸ್ಟ್ರಾಬೆರಿ ಬೆಳೆಯಲು ಆರಂಭಿಸಿದ್ದೇವೆ ಎನ್ನುತ್ತಾರೆ ವುಮೆನ್ ಟೆಕ್ನಾಲಜಿ ಪಾರ್ಕ್‌ನ ನಿರ್ದೇಶಕ ಬಾಬು ಲಮಾಣಿ.

'ರೂಸಾ (RUSA) ಅನುದಾನ

ವಿದ್ಯಾರ್ಥಿನಿಯರ ಪೋಷಕರು ವಿ.ವಿಯ ಪಾಲಿಹೌಸ್‌ಗೆ ಭೇಟಿ ನೀಡಿ ಮಾಹಿತಿ ಪಡೆದಿದ್ದಾರೆ. ತಮ್ಮ ಹೊಲಗಳಲ್ಲೂ ಸ್ಟ್ರಾಬೆರಿ ಬೆಳೆಯಲು ಆಸಕ್ತಿ ತೋರಿಸಿದ್ದಾರೆ
ಬಾಬು ಲಮಾಣಿ

ದಲ್ಲಿ 24X18 ಮೀಟರ್ ಅಳತೆಯ ಎರಡು ಪಾಲಿ ಹೌಸ್‌ಗಳಲ್ಲಿ 'ಸ್ಟ್ರೀಟ್ ಜಾರ್ಲ್' ತಳಿಯ ಸುಮಾರು 1800 ಸ್ಟ್ರಾಬೆರಿ ಸಸಿಗಳನ್ನು ಬೆಳೆಸಿದ್ದೇವೆ. ಇದೀಗ ಹಣ್ಣು ದಿಡಲಾರಂಭವಾಗಿದೆ. ಈ ಹಣ್ಣುಗಳು ವಿಶೇಷವಾಗಿ ಜ್ಯೂಸ್ ಮಾಡಲು ಬಳಕೆಯಾಗುತ್ತವೆ' ಎನ್ನುತ್ತಾರೆ ಅವರು.

'ಸ್ಟ್ರಾಬೆರಿ ಕೃಷಿಗೆ ಕೆಂಪು ಮಣ್ಣು ಅಗತ್ಯ. ಹೀಗಾಗಿ ಹೊರಗಡೆಯಿಂದ ಕೆಂಪುಮಣ್ಣನ್ನು ಇಲ್ಲಿಗೆ ತಂದು ಕೃಷಿಗೆ ಬಳಕೆ ಮಾಡಿದ್ದೇವೆ. ಅಲ್ಲದೇ, ಇಲ್ಲಿಯ ಬಿಸಿಲಿಗೆ ಸ್ಟ್ರಾಬೆರಿ ಹೊಂದಿಕೆಯಾಗುವುದಿಲ್ಲ. ಹೀಗಾಗಿ ಹವಾ ನಿಯಂತ್ರಣದ ಮೂಲಕ ಪಾಲಿಹೌಸ್‌ನಲ್ಲಿ 20ರಿಂದ 30 ಡಿಗ್ರಿ ತಾಪಮಾನವನ್ನು ವ್ಯವಸ್ಥೆ ಮಾಡಿದ್ದೇವೆ. ಬೆಳೆ ಉತ್ತಮವಾಗಿ ಬಂದಿದೆ' ಎಂದು ಹೇಳಿದರು.

'ಸ್ಟ್ರಾಬೆರಿ ಬಹುತೇಕ ಜುಲೈ-ನವೆಂಬರ್ ಅವಧಿಯ ಬೆಳೆ. ಆದರೆ, ವಿಶ್ವವಿದ್ಯಾಲಯದಲ್ಲಿ ಅಕಾಲಿಕ (ಆನ್ ಸೀಜನ್) ಅವಧಿಯಲ್ಲಿ ಬೆಳೆಯನ್ನು



ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವುಮೆನ್ ಟೆಕ್ನಾಲಜಿ ಪಾರ್ಕ್ ವತಿಯಿಂದ ಪಾಲಿಹೌಸ್‌ನಲ್ಲಿ ಬೆಳೆದಿರುವ ಸ್ಟ್ರಾಬೆರಿ ಬೆಳೆ

ಹಣ್ಣಾಗಿರುವ ಸ್ಟ್ರಾಬೆರಿ

ಕ್ಯಾಂಪಸ್ ಒಳಗೊಂದು ಸುತ್ತು

ಬೆಳೆದಿರುವುದು ನಮ್ಮ ಸಾಧನೆ. ನಮ್ಮ ವಿಶ್ವವಿದ್ಯಾಲಯದ ಜೊತೆಗೆ ಸರ್ವೋದಯ ವಿಕಾಸ ಸಂಸ್ಥೆಯ ಸಂಯೋಜಕ ಮೋಹನ್ ದಳವಾಯಿ ಕೈಜೋಡಿಸಿದ್ದಾರೆ' ಎಂದರು.

'ನಮ್ಮ ವಿಜಯಪುರದ ಪರಿಸರದಲ್ಲೂ ಸ್ಟ್ರಾಬೆರಿ ಬೆಳೆಯಬಹುದು ಎಂಬುದು ನಮ್ಮ ಈ ಪ್ರಯತ್ನದಿಂದ ಸ್ಥಾಪಿತವಾಗಿದೆ. ಕೇವಲ ಮೂರು ತಿಂಗಳಲ್ಲಿ ಬೆಳೆ ಬಂದಿದೆ. ಸದ್ಯ ಪ್ರತಿದಿನ ಎರಡು ಕೆ.ಜಿ. ಹಣ್ಣು ಸಿಗುತ್ತಿದೆ. ಮಾರುಕಟ್ಟೆಗಿಂತ ಶೇ 25ರಷ್ಟು ಕಡಿಮೆ ದರಕ್ಕೆ ಹಣ್ಣನ್ನು ಮಾರಾಟ ಮಾಡುತ್ತಿದ್ದೇವೆ. ವಿಶ್ವವಿದ್ಯಾಲಯದ ಸಿಬ್ಬಂದಿಯೇ ಬಹುತೇಕ ಖರೀದಿ ಮಾಡುತ್ತಿದ್ದಾರೆ' ಎಂದು ವಿವರಿಸಿದರು.

'ಸ್ಟ್ರಾಬೆರಿ ಕೃಷಿಯ ಬಗ್ಗೆ ವಿಶ್ವವಿದ್ಯಾಲಯದ ಕುಲಪತಿ, ಕುಲಸಚಿವರು, ಸಿಬ್ಬಂದಿ ಮೆಚ್ಚುಗೆ ವ್ಯಕ್ತಪಡಿಸಿರುವುದು ನಮ್ಮ ಪ್ರಯತ್ನಕ್ಕೆ ಯಶಸ್ಸು ಲಭಿಸಿದಂತಾಗಿದೆ. ಸಾವಯವ ಪದ್ಧತಿಯಲ್ಲಿ ಸ್ಟ್ರಾಬೆರಿ ಬೆಳೆಯುತ್ತಿದ್ದೇವೆ. ಎಲ್ಲಿಯೂ ಔಷಧ, ಗೊಬ್ಬರ ಬಳಕೆ ಮಾಡುತ್ತಿಲ್ಲ. ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡಿದ್ದೇವೆ. ಸ್ಟ್ರಾಬೆರಿ ಕೃಷಿಗಾಗಿ ರೂಸಾದಿಂದ ₹ 40 ಲಕ್ಷ ಅನುದಾನ ಲಭಿಸಿದೆ' ಎಂದು ಹೇಳಿದರು.

'ಮಾರ್ಚ್ 6ರಂದು ವಿಶ್ವ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಜಿಲ್ಲೆಯ ಆಸಕ್ತ ಕೃಷಿ ಮಹಿಳೆಯರಿಗೆ ಸ್ಟ್ರಾಬೆರಿ ಕೃಷಿ ಬಗ್ಗೆ ತರಬೇತಿ ನೀಡುವ ಉದ್ದೇಶವಿದೆ. ಆಸಕ್ತರು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ವೀಕ್ಷಣೆ ಮಾಡಬಹುದು. ಜೊತೆಗೆ ಕೃಷಿ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದು' ಎಂದು ಕೋರಿದರು.

- ಜಿಲ್ಲೆಯ ತೋಟಗಾರಿಕಾ ಕ್ಷೇತ್ರಕ್ಕೆ ಹೊಸ ಬೆಳೆಯನ್ನು ಪರಿಚಯಿಸಿದ ವಿ.ವಿ
- ಮಹಿಳೆಯರಿಗೆ ತರಬೇತಿ ನೀಡುವ ಸದುದ್ದೇಶದಿಂದ ಸ್ಟ್ರಾಬೆರಿ ಬೆಳೆಯಲು ಆರಂಭ

'ಕೃಷಿಕರು ಒಂದು ಎಕರೆಯಲ್ಲಿ ಸುಮಾರು ₹30 ಲಕ್ಷ ಆದಾಯ ಗಳಿಸಬಹುದಾಗಿದೆ. ಕೃಷಿಗೆ ಸುಮಾರು ₹ 6 ಲಕ್ಷ ಖರ್ಚಾಗುತ್ತದೆ. ಆಸಕ್ತ ರೈತರು ಈ ಕೃಷಿಗೆ ಒತ್ತು ನೀಡಬಹುದಾಗಿದೆ' ಎನ್ನುತ್ತಾರೆ ಅವರು.

ಮಾಹಿತಿಗಾಗಿ ವಿಶ್ವವಿದ್ಯಾಲಯದ ವುಮನ್ ಟೆಕ್ನಾಲಜಿ ಪಾರ್ಕ್‌ನ ನಿರ್ದೇಶಕ ಬಾಬು ಲಮಾಣಿ (9535990125) ಅವರನ್ನು ಸಂಪರ್ಕಿಸಬಹುದು.

Event : Women Technology Park success story
Date : 19/2/2021, Prajavani, Page 3.
Dept : KSAWU
Resource Person :

Event: Workshop on Strawberry to rural women

Date: 8.2.2021

Resource Person: Women Technology Park.

ಶುಂಯುಕ್ತ - ತನಿಖೆ ಕಿಲ-ಕಿ-೨೦೨೧. ಪು-೯

ವಿಜಯಪುರದಲ್ಲಿ ಹಣ್ಣು ಬಿಟ್ಟ ಮಹಾಬಲೇಶ್ವರದ ಸ್ಟ್ರಾಬೆರಿ | ಎಕರೆಗೆ 15 ರಿಂದ 20 ಲಕ್ಷ ಆದಾಯ

ಮಹಿಳಾ ವಿವಿಯಲ್ಲಿ ಸ್ಟ್ರಾಬೆರಿ ಕೃಷಿ

■ ಶರಣಪ್ಪ ಮಾರನೂರ

ವಿಜಯಪುರ: ಮಹಿಳೆಯರು ಕೃಷಿ, ಹೈನುಗಾರಿಕೆ, ಮಾಹಿತಿ ತಂತ್ರಜ್ಞಾನ, ಬ್ಯಾಂಕಿಂಗ್ ಸೇರಿದಂತೆ ಹಲವಾರು ಕ್ಷೇತ್ರದಲ್ಲಿ ಸಾಧನೆ ಮಾಡಿರುವುದು ಕಾಣುತ್ತೇವೆ. ಜಿಲ್ಲೆಯಲ್ಲಿ ಮಳೆಯ ಪ್ರಮಾಣವೂ ಕಡಿಮೆ ಇದೆ. ಹೀಗಾಗಿ ಇಲ್ಲಿನ ಹವಾಮಾನವೂ ಸಹಿತ ಅಧಿಕ ಉಷ್ಣಾಂಶದಿಂದ ಕೂಡಿದ್ದು, ಕೆಲವು ಹಣ್ಣು ಹಾಗೂ ಬೆಳೆಗಳನ್ನು ಬೆಳೆಯಲು ಸಾಧ್ಯವಿಲ್ಲ. ಆದರೆ ವ್ಯತಿರಿಕ್ತ ಹವಾಮಾನದಲ್ಲೂ ಮಹಿಳಾ ವಿವಿ ಸ್ಟ್ರಾಬೆರಿ ಬೆಳೆದಿದ್ದು ರೈತರಲ್ಲಿ ಕುತೂಹಲ ಹೆಚ್ಚಿಸಿದೆ.

ಹೌದು, ರಾಜ್ಯದ ಏಕೈಕ ಮಹಿಳಾ ವಿವಿ ಎನ್ನಿಸಿಕೊಂಡಿರುವ ಅಕ್ಕಮಾಹದೇವಿ ಮಾಹಿಳಾ ವಿಶ್ವವಿದ್ಯಾಲಯದ 'ವುಮೆನ್ ಟೆಕ್ನಾಲಜಿ ಪಾರ್ಕ್ ಸಿಬ್ಬಂದಿ' ಬಿಸಿಲು ನಾಡಲ್ಲೂ ಸ್ಟ್ರಾಬೆರಿ ಬೆಳೆದು ಸಾಧನೆ ಮಾಡಿದೆ.

ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿವಿಯಲ್ಲಿ ಬೆಳೆದ ಸ್ಟ್ರಾಬೆರಿ ಹಣ್ಣುಗಳು.

ಸಾವಯವ ಪದ್ಧತಿ ಅಳವಡಿಕೆ...

ಸ್ಟ್ರಾಬೆರಿ ಬೆಳೆಯಲು ಸಂಪೂರ್ಣ ಸಾವಯವ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದ್ದು, ರಾಸಾಯನಿಕ ಗೊಬ್ಬರ, ಔಷಧಿಗಳನ್ನು ಬಳಕೆ ಮಾಡಿಕೊಳ್ಳುತ್ತಿಲ್ಲ. ಹಣ್ಣು ಮಾರುಕಟ್ಟೆಯಲ್ಲಿಗಿಂತ ರುಚಿಯಾಗಿವೆ. ರಾಸಾಯನಿಕ ಬಳಸದಿದ್ದರೂ ಯಾವುದೇ ರೋಗಗಳು ಬೆಳೆಗೆ ಕಾಡುತ್ತಿಲ್ಲ. ಬೆಳೆ ಉತ್ತಮವಾಗಿದ್ದು, ಮೂರೇ ತಿಂಗಳಿಗೆ ಬೆಳೆ ಬಂದಿದೆ. ಪ್ರಸ್ತುತ ದಿನಕ್ಕೆ 2 ಕೆ.ಜಿ ಹಣ್ಣು ದೊರೆಯುತ್ತಿದೆ. ಈ ಸಾವಯವ ಪದ್ಧತಿಯಲ್ಲಿ ಬೆಳೆಯುತ್ತಿರುವುದರಿಂದ ಕಡಿಮೆ ಖರ್ಚಿನಲ್ಲಿ ಉತ್ಕೃಷ್ಟವಾದ ಹಣ್ಣುಗಳನ್ನು ಬೆಳೆಯಬಹುದಾಗಿದೆ.

ರೂಸಾದಿಂದ ಸ್ಟ್ರಾಬೆರಿ ಬೆಳೆಯಲು 40 ಲಕ್ಷ ಅನುದಾನ ದೊರೆತಿದ್ದು, ಮಹಿಳಾ ವಿವಿಯಲ್ಲಿ 24★18 ಮೀಟರ್ ಅಳತೆಯ ಎರಡು ವ್ಯವಸ್ಥಿತ ಪಾಲಿ ಹೌಸ್ ನಿರ್ಮಾಣ ಮಾಡಿ ಅದರಲ್ಲಿ ಸುಮಾರು 1800 ಸ್ಟ್ರಾಬೇರಿ ಸಸಿಗಳನ್ನು ಬೆಳೆಸಲಾಗಿದ್ದು, ಈಗ ಅವು ಹಣ್ಣು ಬಿಡುತ್ತಿವೆ. ಬೇರೆ ಕಡೆಯಿಂದ ಕೆಂಪು ಮಣ್ಣು ಇದಕ್ಕಾಗಿ ತರಲಾಗಿದೆ.

ಬೆಳೆಗೆ ಅಗತ್ಯವಿರುವ ಹವಾಮಾನ ಇರುವಂತೆ ಪಾಲಿ ಹೌಸ್‌ನಲ್ಲಿ 20 ರಿಂದ 30 ಡಿಗ್ರಿ ಹವಾಮಾನ ವ್ಯವಸ್ಥೆ ಮಾಡಿದ್ದು, ಬೆಳೆ ಉತ್ತಮವಾಗಿ ಹಣ್ಣು ಬಿಡುತ್ತಿವೆ. ಮಹಿಳಾ ಮಣಿಗಳ ವಿವಿಯ ಕಾರ್ಯ ಜಿಲ್ಲೆಯಲ್ಲಿ ಮೆಚ್ಚುಗೆಗೆ ಪಾತ್ರವಾಗಿದ್ದು, ಸುತ್ತಮುತ್ತಲಿನ ರೈತರು ವಿವಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ ಎನ್ನುತ್ತಾರೆ ಸಂಯೋಜಕ ಬಾಬು ಅಮಾನ್.

> **“ ಹೊ**ಸ ಪ್ರಯತ್ನಕ್ಕೆ ಯಶಸ್ಸು ದೊರೆತಿದ್ದು, ಕೃಷಿಕ ಹೆಣ್ಣು ಮಕ್ಕಳಿಗೆ ಲಾಭದಾಯಕ ಆಗುವ ಮಾರ್ಗವಿದೆ. ಜಿಲ್ಲೆಯ ಕೃಷಿಕ ಮಹಿಳೆಯರು ಸ್ಟ್ರಾಬೆರಿ ಬೆಳೆಯಲು ಮುಂದೆ ಬರುವುದೆ, ವಿವಿ ಕಾರ್ಯಕ್ಕೆ ಅಗತ್ಯ ತರಬೇತಿ ಹಾಗೂ ಸೌಲಭ್ಯ ಗಳನ್ನು ನೀಡಲಿದೆ.
>
> ■ ಪ್ರೊ. ಬಿ.ಕೆ. ತುಳಸಿಮಾಲಾ
> | ಮಹಿಳಾ ವಿವಿ ಕುಲಪತಿ

Event:

Date:

Dept:

Res Person: